ತುಮಕೂರು	321	32,10,000/–
ಶಿವಮೊಗ್ಗ	260	26,00,000/–
ಚಿತ್ರದುರ್ಗ	185	18,50,000/–
ದಾವಣಗೆರೆ	230	23,00,000/–
ಮೈಸೂರು	235	23,50,000/–
ಮಂಡ್ಯ	232	23,20,000/–
ಚಿಕ್ಕಮಗಳೂರು	226	22,60,000/–
ಹಾಸನ	258	25,80,000/–
ಮಂಗಳೂರು	203	20,30,000/–
ಮಡಿಕೇರಿ	98	9,80,000/–
ಬೆಳಗಾಂ	485	48,50,000/–
ಧಾರವಾಡ	127	12,70,000/–
ಬಿಜಾಪುರ	201	20,10,000/–
ಕಾರವಾರ	208	20,80,000/–
ಗುಲ್ಬರ್ಗಾ	338	33,80,000/–
ಬೀದರ್	175	17,50,000/–
ಬಳ್ಳಾರಿ	191	19,10,000/–
ರಾಯಚೂರು	1616	16,60,000/–
ಚಾಮರಾಜನಗರ	121	12,10,000/–
ಗದಗ	106	10,60,000/–
ಉಡುಪಿ	143	14,30,000/–
ಬಾಗಲಕೋಟೆ	163	16,30,000/–
ಕೊಪ್ಪಳ	134	13,40,000/–
ಹಾವೇರಿ	206	20,60,000/–
ಒಟ್ಟು	**5659**	**5,65,90,000/-**

ಊ) ಈ ಸಾಲಿನಲ್ಲಿ ರಾಜೀವ್ ಗಾಂಧಿ ಯುವಶಕ್ತಿ ಸಂಘಗಳಿಗೆ ಹಣ ಬಿಡುಗಡೆ ಮಾಡಿರುವುದಿಲ್ಲ. ಕಾರಣ, ಆಯವ್ಯಯದಲ್ಲಿ ಈ ಉದ್ದೇಶಕ್ಕಾಗಿ ಯಾವುದೇ ಹಣ ಒದಗಿಸಿರುವುದಿಲ್ಲ.

ಋ) ಕ್ರೀಡೆ ಸಂಸ್ಕೃತಿ ಮತ್ತು ಸಮುದಾಯ ಅಭಿವೃದ್ಧಿ ಚಟುವಟಿಕೆಗಳಲ್ಲಿ ಯುವಕ/ಯುವತಿಯರನ್ನು ತೊಡಗಿಸುವುದೇ ರಾಜೀವ್ ಗಾಂಧಿ ಯುವಶಕ್ತಿ ಸಂಘಗಳ ಮುಖ್ಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಸಂಘಗಳು ಸಮುದಾಯ ಅಭಿವೃದ್ಧಿ, ಕ್ರೀಡಾಭಿವೃದ್ಧಿ, ಸಾಂಸ್ಕೃತಿಕ, ಶೈಕ್ಷಣಿಕ, ಆರೋಗ್ಯ ಮತ್ತು ವ್ಯಕ್ತಿತ್ವ ವಿಕಸನ ಕ್ಷೇತ್ರಗಳಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ.

683(1593) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ನೆರೆ ರಾಜ್ಯವಾದ ಕೇರಳವು ಪ್ರವಾಸೋದ್ಯಮಕ್ಕೆ ಹೆಚ್ಚಿಗೆ ಒತ್ತು ಕೊಟ್ಟು ದೇಶೀಯ ಹಾಗೂ ವಿದೇಶಿ ಪ್ರವಾಸಿಗರನ್ನು ಸೆಳೆಯಲು ಯಶಸ್ವಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ರಾಜ್ಯ ಸರ್ಕಾರ ರಾಜ್ಯದಲ್ಲಿ ಇದೇ ರೀತಿ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಲು ತೆಗೆದುಕೊಂಡ ಕ್ರಮಗಳೇನು; ಈ ಕ್ರಮಗಳು ಸಫಲವಾಗಿದೆಯೇ;

ಇ) ರಾಜ್ಯಕ್ಕೆ ಭೇಟಿ ನೀಡುತ್ತಿರುವ ದೇಶೀಯ ಹಾಗೂ ವಿದೇಶಿ ಪ್ರವಾಸಿಗರ ಸಂಖ್ಯೆ ಎಷ್ಟು; ಇದರಿಂದ ರಾಜ್ಯಕ್ಕೆ ಬರುತ್ತಿರುವ ಆದಾಯ ಎಷ್ಟು;

ಈ) ಈ ಪ್ರವಾಸಿಗರು ಹೆಚ್ಚಾಗಿ ಸಂದರ್ಶಿಸುತ್ತಿರುವ ಸ್ಥಳಗಳಾವುವು;

ಉ) ಆಯುರ್ವೇದ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಿ ವಿದೇಶಿ ಪ್ರವಾಸಿಗರನ್ನು ಆಕರ್ಷಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಊ) ರಾಜ್ಯದ ಕಡಲ ತೀರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಲು ಬರುವ ಉದ್ಯಮಗಳಿಗೆ ಸರ್ಕಾರ ನೆರವು ನೀಡುತ್ತಿದೆಯೇ ಇದ್ದಲ್ಲಿ ಎಲ್ಲಾ ವಿವರಗಳನ್ನು ಒದಗಿಸುವುದು?

ಶ್ರೀ ಡಿ. ಟಿ. ಜಯಕುಮಾರ್ (ಮಾನ್ಯ ಪ್ರವಾಸೋದ್ಯಮ ಸಚಿವರು) :

ಅ) ಹೌದು,

ಆ) ಕೇಂದ್ರ ಸರ್ಕಾರದ ನೆರವಿನಿಂದ ಹಾಗೂ ರಾಜ್ಯ ಸರ್ಕಾರದ ಅನುದಾನದಿಂದ ಪ್ರಮುಖ ಪ್ರವಾಸಿ ಸ್ಥಳಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ನಿರ್ಮಿಸಲಾಗುತ್ತಿದೆ. ಪ್ರವಾಸಿ ಆಕರ್ಷಣೆಗಳ ಬಗ್ಗೆ ಹಾಗೂ ಸೌಲಭ್ಯಗಳ ಬಗ್ಗೆ ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ನೀಡಲಾಗುತ್ತಿದೆ.

ಇ) ರಾಜ್ಯಕ್ಕೆ ಸುಮಾರು 1.9 ಕೋಟಿ ದೇಶಿಯ ಪ್ರವಾಸಿಗರು ಹಾಗೂ 1.43 ಲಕ್ಷ ವಿದೇಶಿ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ರಾಜ್ಯಕ್ಕೆ ಪ್ರತ್ಯಕ್ಷ ಆದಾಯ ಇಂತಿಷ್ಟೇ ಎಂದು ಹೇಳಲು ಸಾಧ್ಯವಿರುವುದಿಲ್ಲ. ಆದರೆ ಪ್ರವಾಸಿಗರ ತಂಗುವ ಹೋಟೆಲ್‌ಗಳ ಮೇಲೆ ವಿಧಿಸುವ ಐಷಾರಾಮಿ ತೆರಿಗೆ, ಪ್ರವಾಸಿಗರು ಉಪಯೋಗಿಸುವ ಮೋಟಾರು ವಾಹನಗಳ ಮೇಲೆ ವಿಧಿಸುವ ತೆರಿಗೆ ಹಾಗೂ ಪ್ರವಾಸಿಗರು ಉಪಯೋಗಿಸುವ ಸೌಲಭ್ಯಗಳ ಮೇಲೆ ವಿಧಿಸುವ ತೆರಿಗೆ ಮೂಲಕ ಪರೋಕ್ಷವಾಗಿ ರಾಜ್ಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಆದಾಯ ಬರುತ್ತದೆ.

ಈ) ಬೆಂಗಳೂರು, ಮೈಸೂರು, ಹಂಪಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಬಿಜಾಪುರ, ಬೇಲೂರು, ಹಳೇಬೀಡು, ಶ್ರವಣಬೆಳಗೋಳ ಹಾಗೂ ಕೊಡಗು.

ಉ) 1. ಆಯುರ್ವೇದ ಚಿಕಿತ್ಸಾ ಸೌಲಭ್ಯಗಳನ್ನು ಒಳಗೊಂಡ ಖಾಸಗಿ ಪ್ರವಾಸೋದ್ಯಮ ಯೋಜನೆಗಳಿಗೆ ಇಲಾಖೆ ರಿಯಾಯಿತಿ ಮತ್ತು ಉತ್ತೇಜನಗಳನ್ನು ಹಾಗೂ ಪ್ರಚಾರ ನೀಡಲಾಗಿದೆ.

2. ಮಂಗಳೂರು ಸಮೀಪದ ಪಿಲಿಕುಲ ನಿಸರ್ಗ ಧಾಮದಲ್ಲಿ ಆಯುರ್ವೇದ ಚಿಕಿತ್ಸಾ ಕೇಂದ್ರದ ನಿರ್ಮಾಣವನ್ನು ಕೇಂದ್ರದ ನೆರವಿನೊಂದಿಗೆ 50.00 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕೈಗೊಂಡಿದ್ದು ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದೆ.

3. ಮೈ: ಅರಣ್ಯ, ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆಗೆ ಸೇರಿರುವ ಓಂ ಬೀಚ್ ರೆಸಾರ್ಟ್ಸ್, ಗೋಕರ್ಣ ಹಾಗೂ ಹಿಸ್ಟರಿ ವ್ಯೂ ರೆಸಾರ್ಟ್ಸ್, ಕಾರವಾರ ಇವುಗಳನ್ನು ಮೈ: ಕೈರಾಲಿ ಆಯುರ್ವೇದಿಕ್ ರೆಸಾರ್ಟ್ಸ್ ಇವರೊಂದಿಗೆ ಮ್ಯಾನೇಜ್‌ಮೆಂಟ್ ಕಾಂಟ್ರಾಕ್ಟ್ ಮೇರೆಗೆ ನಡೆಸಲಾಗುತ್ತಿದೆ.

ಊ) ಹೌದು,

1992ರಿಂದ 2002ರ ಮೇ 31 ರವರೆಗೆ ರಾಜ್ಯದ ಕಡಲ ತೀರಗಳಲ್ಲಿ ಅನುಮೋದಿಸಲ್ಪಟ್ಟ ಪ್ರವಾಸೋದ್ಯಮ ಯೋಜನೆಗಳಿಗೆ ಸಹಾಯಧನ, ತೆರಿಗೆ ವಿನಾಯಿತಿ ರಿಯಾಯಿತಿ ದರದಲ್ಲಿ ವಿದ್ಯುಚ್ಛಕ್ತಿ, ಭೂಪರಿವರ್ತನಾ ಶುಲ್ಕವನ್ನು ಮನ್ನಾ ಮಾಡುವುದು, ಮುಂತಾದ ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲಾಗಿದೆ.

684(1594): ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷದಲ್ಲಿ ಸಂಗ್ರಹವಾದ ಅಬಕಾರಿ ಆದಾಯ ಎಷ್ಟು? (ವರ್ಷವಾರು, ಜಿಲ್ಲಾವಾರು, ಸಾರಾಯೀ (IMFL) ವಾರು ವಿವರ ಒದಗಿಸುವುದು);

ಆ) ಇದೇ ಅವಧಿಯಲ್ಲಿ ಇಲಾಖೆ ವಿವಿಧ ಕಡೆ ನಡೆಸಿದ ತಪಾಸಣೆಗಳೆಷ್ಟು? (ವಶಪಡಿಸಿಕೊಂಡ ಮದ್ಯದ ವಿವರ, ವಿಧಿಸಿದ ದಂಡ, ಪರವನಗಿ ರದ್ದುಪಡಿಸಿದ ಬಗ್ಗೆ ಜಿಲ್ಲಾವಾರು, ವರ್ಷಾವಾರು ವಿವರ ನೀಡುವುದು);

ಇ) ಮದ್ಯದ ಅಂಗಡಿಗಳಲ್ಲಿ ಸೆಕೆಂಡ್ಸ್, ಥರ್ಡ್ಸ್ ಮದ್ಯ ಪತ್ತೆಯಾದಲ್ಲಿ ಈಗ ತೆಗೆದುಕೊಳ್ಳುತ್ತಿರುವ ಕಾನೂನು ಕ್ರಮಗಳೇನು?

ಈ) ಇಂತಹ ಪ್ರಕರಣಗಳು ಪತ್ತೆಯಾದಾಗ ಅಂಗಡಿಗಳ ಪರವಾನಗಿಯನ್ನು ರದ್ದುಪಡಿಸಲು ಸರ್ಕಾರ ಕಾನೂನಿಗೆ ತಿದ್ದುಪಡಿ ತರುವುದೇ: ಹೌದಾದಲ್ಲಿ, ಯಾವಾಗ ತರಲಾಗುವುದು, ಇಲ್ಲವಾದಲ್ಲಿ ಕಾರಣಗಳೇನು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು) :

ಅ) ಕಳೆದ ಮೂರು ವರ್ಷದಲ್ಲಿ ಸಂಗ್ರಹವಾದ ಆದಾಯದ ವಿವರ ಈ ಕೆಳಕಂಡಂತಿದೆ.

2001–02 – ರೂ. 2004.11 ಕೋಟಿಗಳು

2002–03 – ರೂ. 2118.59 ಕೋಟಿಗಳು

2003–04 – ರೂ. 2364.90 ಕೋಟಿಗಳು

ವಿವರವನ್ನು ಅನುಬಂಧ–ಎ ನಲ್ಲಿ ಒದಗಿಸಿದೆ.

ಆ) ವಿವರಗಳನ್ನು ಅನುಬಂಧ–ಬಿ ನಲ್ಲಿ ಒದಗಿಸಿದೆ.

ಇ) ಮದ್ಯದ ಅಂಗಡಿಗಳಲ್ಲಿ ಸೆಕೆಂಡ್ಸ್ , ಥರ್ಡ್ಸ್ ಮದ್ಯ ಪತ್ತೆಯಾದಲ್ಲಿ ಆಯಾ ಅಂಗಡಿಯ ಸನ್ನದನ್ನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 29ರ ಪ್ರಕಾರ ಅಮಾನತ್ತು ಅಥವಾ ರದ್ದುಗೊಳಿಸಬಹುದಾಗಿದೆ. ಜೊತೆಗೆ ಪೂರ್ಣ ಪ್ರಮಾಣದ ಮದ್ಯ ದಾಸ್ತಾನನ್ನು ಜಪ್ತು ಮಾಡಿ ಅದರ ಮೌಲ್ಯವನ್ನು ವಸೂಲು ಮಾಡಿ ದಂಡ ವಿಧಿಸಬಹುದಾಗಿದೆ.

ಇದನ್ನು ತಿದ್ದುಪಡಿ ಮಾಡಿ ಸನ್ನದನ್ನು ರದ್ದುಗೊಳಿಸತಕ್ಕೆದೆಂದು ಉಪಬಂಧ ತರುವ ವಿಷಯವು ಪರಿಶೀಲನೆಯಲ್ಲಿದೆ.